# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.3 : PW.3**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಜೀವಾ |
| **ತಂದೆಯ ಹೆಸರು** | : | ವೆಂಕಟೇಶ್ |
| **ವಯಸ್ಸು** | : | 32 ವರ್ಷ |
| **ಉದ್ಯೋಗ** | : | ಆಟೋ ಚಾಲಕ |
| **ವಾಸಸ್ಥಳ** | : | ಶೇಷಾದ್ರಿಪುರಂ, ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 15.09.2023 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1 ಗೊತ್ತು. ಆರೋಪಿತರು ಗೊತ್ತಿಲ್ಲ. ಚಾಸಾ-1 ಮತ್ತು ಆರೋಪಿಯ ನಡುವಿನ ಗಲಾಟೆಯ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.2(ಬಿ)** ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸಿನವರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಈಗ್ಗೆ 1 ವರ್ಷದ ಹಿಂದೆ ಪೊಲೀಸರು ನಿಪಿ-2 ಕ್ಕೆ ನನ್ನ ಸಹಿ ಪಡೆದಿದ್ದರು. ನಿಪಿ-2 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರುತ್ತಾರೆ. ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

2. ದಿನಾಂಕ 28.07.2022 ರಂದು ಬೆಳಿಗ್ಗೆ 10.00 ರಿಂದ 10-45 ರ ವರೆಗೆ ಘಟನಾ ಸ್ಥಳಕ್ಕೆ ಪೊಲೀಸಿನವರು ಹಾಜರಾಗಿ ನಿಪಿ.2 ರಂತೆ ಮಹಜರ್ ಮಾಡಿದ್ದಾರೆಂದರೆ ಸರಿಯಲ್ಲ. ನಾನು ಘಟನೆ ಸಂಬಂಧ ದಿನಾಂಕ 27.07.2022 ರಂದು ‘‘ ನಾನು ಈ ಮೇಲ್ಕಂಡ ವಿಳಾಸದಲ್ಲಿ ---------- ಹೋಗಿರುತ್ತಾರೆ” ಎಂದು ಹೇಳಿಕೆಯನ್ನು ಪೋಲಿಸಿನವರ ಸಮಕ್ಷಮ ನೀಡಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ.3** ಎಂದು ಗುರುತಿಸಲಾಯಿತು. ನಿಮಗೆ ನಿಪಿ.2 ಮತ್ತು 3 ರ ವಿಚಾರ ಗೊತ್ತಿದ್ದರು ಸಹಾ ಆರೋಪಿತನೊಂದಿಗೆ ನೀವು ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸಾವಲುಃ** ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**